<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

**<u>ಕೆ.ಆರ್.ನಗರ</u>**

**<u>ಒ.ಎಸ್ 539/2017</u>**

**ಪಿಡಬ್ಲ್ಯೂ1**

**<u>ದಿನಾಂಕ 11-04-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಪಾಟೀ ಸವಾಲು ಶ್ರಿ ಎಲ್ ವಿ ಆರ್ ವಕೀಲರಿಂದ ಪ್ರತಿವಾದಿ ಪರ ವಕೀಲರುಃ</u>

ನಿಪಿ 1 ರ ಮೂಲಕ ಸ.ನಂ.10/1 ರಲ್ಲಿ 9 ಗುಂಟೆ ಸ.ನಂ.10/4 ರಲ್ಲಿ 42 ಗುಂಟೆ ಪಡೆಯಲಾಯಿತು. ಈ ರೀತಿ ಪ್ರತ್ಯೇಕವಾಗಿ ವಿಸ್ತೀರ್ಣವನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ 1 ರಂತೆ ಕ್ರಯ ಪಡೆಯುವ ಮುನ್ನ ನನ್ನ ತಂದೆ ದಾವಾ ಸ್ವತ್ತಿನ ಅಳತೆ ಮಾಡಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಪಿ 2 ರ ವಿಭಾಗ ಪತ್ರ ಆಗುವ ಮುನ್ನ ದಾವಾ ಸ್ವತ್ತಿನ ಅಳತೆ ಮಾಡಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. 1977 ರ ನಂತರ ಈವರೆಗೂ ದಾವಾ ಸ್ವತ್ತಿನ ಅಳತೆ ಮಾಡಿಸಿಲ್ಲ. ನಿಪಿ 2 ರಂತೆ ನನ್ನ ತಂದೆ ಹಾಗೂ 5 ನೇ ಪ್ರತಿವಾದಿ ನಿಪಿ 1 ರ ಸ್ವತ್ತುಗಳನ್ನು ಹಂಚಿಕೊಂಡಿದ್ದಾರೆ ಎಂದರೆ 9 ಗುಂಟೆಯನ್ನು ನಾವೇ ಉಳಿಸಿಕೊಂಡಿದ್ದೇವೆ ಉಳಿದ ಗುಂಟೆಗಳಲ್ಲಿ ತಲಾ 25 1/2 ಗಂಟೆ ನನ್ನ ತಂದೆ ಹಾಗೂ 5 ಪ್ರತಿವಾದಿ ಹಂಚಿಕೊಂಡಿದ್ದಾರೆ ಎಂದು ಸಾಕ್ಷಿಯು ನುಡಿಯುತ್ತಾರೆ. ಈ ಬಗ್ಗೆ ದಾವಾ ಪ್ರತಿಯಲ್ಲಿ ನಮೂದಿಸಿದ್ದೇನೆ.

2. ಸಾಕ್ಷಿಗೆ ದಿಃ 14.08.2000 ದ ಅಧಿಸೂಚನೆಯ ನಕಲು ಪ್ರತಿಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಚಿತ್ರವನ್ನು ತೋರಿಸಲಾಗಿ ಅದರಲ್ಲಿರುವ ಮನೆ ತನ್ನದ್ದು ಎಂದು ಸಾಕ್ಷಿಯು ಗುರುತಿಸಿದು ಅದು ಸ.ನಂ.10/4 ರಲ್ಲಿ ಇದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಆದ್ದರಿಂದ ಸದರಿ ಛಾಯಚಿತ್ರವನ್ನು ನಿಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಛಾಯಚಿತ್ರವನ್ನು ತೋರಿಸಲಾಗಿ ಅದರಲ್ಲಿರುವ ಮನೆ ತನ್ನದೇ ಆದರೆ ಹಿಂಬಾಗದ ಭಾಗ ಎಂದು ಸಾಕ್ಷಿಯು ನುಡಿದ

ಮೇರೆಗೆ ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಮತ್ತೊಂದು ಛಾಯಚಿತ್ರವನ್ನು ತೋರಿಸಲಾಗಿ ಅದರಲ್ಲಿರುವ ಮನೆ 5 ನೇ ಪ್ರತಿವಾದಿಯದ್ದು ಎಂದು ಸಾಕ್ಷಿಯು ನುಡಿದ ಮೇರೆಗೆ ಸದರಿ ಛಾಯಚಿತ್ರವನ್ನು ನಿಡಿ 4 ಎಂದು ಗುರುತಿಸಲಾಯಿತು. ನಿಡಿ 2 ರಲ್ಲಿ ಕಾಣುವ ಮನೆ ಸುಮಾರು 2 ಲಕ್ಷ ಬೆಲೆ ಬಾಳುಹುದು. ನಿಡಿ 2 ಮತ್ತು 3 ಮನೆ ಸ.ನಂ. 10/4 ರಲ್ಲಿ ಇದೆ ಎಂದು ದಾವಾ ಪ್ರತಿಯಲ್ಲಿ ತಿಳಿಸಿದ್ದೇನೆ.

3. ನಿಂಗಮ್ಮ ಪ್ರತಿವಾದಿಗಳ ಪೂರ್ವಿಕರು. ಅವರು ದಿಃ 03.09.1941 ರಂದು ಸ.ನಂ.10 ರಲ್ಲಿ 1.40 ಗುಂಟೆ ಸ್ವತ್ತನ್ನು ಖರೀದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮತ್ತು ಸ.ನಂ.10/1 ,3 ಮತ್ತು 4 ರಲ್ಲಿ ಪ್ರತಿವಾದಿಗಳ ಸ್ವತ್ತು ಇದೆ ಎಂದರೆ ನನಗೆ ಗೊತ್ತಿಲ್ಲ. 9 ಗುಂಟೆ ಹೊರತುಪಡಿಸಿ ವಿಭಾಗವಾಗಿದೆ ಎಂದು ನಿಪಿ 2 ರಲ್ಲಿ ನಮೂದು ಇಲ್ಲ. ಈ ಬಗ್ಗೆ ದಾವಾ ಪ್ರತಿಯಲ್ಲಿ ತಿಳಿಸಿದ್ದೀರಾ ಎಂದರೆ 9 ಗುಂಟೆ ನಮಗೆ ಬರಬೇಕು ಎಂದು ತಿಳಿಸಿದ್ದೇನೆ ಎಂದು ಸಾಕ್ಷಿಯು ನುಡಿಯುತ್ತಾರೆ. ಪ್ರತಿವಾದಿ 1 ರಿಂದ 4 ಯಾವ ಸ್ವತ್ತಿನಲ್ಲಿ ಅನುಭವದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಅವರ ಪೂರ್ವವಿಕರ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ.

4. ಮರೀಗೌಡ ಹಾಗೂ ನಿಂಗಮ್ಮರವರಿಗೆ ಬಸವೇಗೌಡ ಮತ್ತು ಸಣ್ಣಪ್ಪ ಎಂಬ ಮಕ್ಕಳು ಎಂದರೆ ಸರಿ. ದಿಃ 18.04.2013 ರಂದು ಶಿವಮ್ಮ ಹಾಗೂ ಅವರ ಮಕ್ಕಳ ನಡುವೆ ಆಸ್ತಿ ವಿಭಾಗವಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 2 ನ್ನು ನಾನು ಪ್ರಶ್ನೆ ಮಾಡಿಲ್ಲ ಅ ಬಗ್ಗೆ ನನಗೆ ಗೊತ್ತಿರಲಿಲ್ಲ. ಸಾಕ್ಷಿಗೆ ಒಂದು ವಿಭಾಗ ಪತ್ರದ ನಕಲನ್ನು ತೋರಿಸಲಾಗಿ ಅದರೆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದುಡಿರುತ್ತಾರೆ. ಸ.ನಂ.10 ರಲ್ಲಿ ಎಷ್ಟು ಪೋಡಾಗಿದೆ ಎಂದು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸ.ನಂ.10 ರಲ್ಲಿ ಸುಮಾರು 15 ಪೊಡಾಗಿದ್ದು ಅದರಲ್ಲಿ ಯಾರು ಯಾರಿಗೆ ಎಷ್ಟೆಷ್ಟೂ ಸ್ವತ್ತು ಹಂಚಿಕೆಯಾಗಿದೆ ಎಂದು ತಿಳಿದುಕೊಂಡಿಲ್ಲ.

5. ನಿಪಿ 12 ರಲ್ಲಿರುವ ದಾಕ್ಷಾಯಿನಿಯನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನಿಪಿ 10 ರಲ್ಲಿ ಕಾಣುವ ಸ್ವತ್ತುಗಳಲ್ಲಿ ನನಗೆ ಯಾವುದೇ ಭಾಗ ಬರಬೇಕು ಎಂದರೆ ಸರಿ. ನಾಲೆಗೆ ಹೋಗಿರುವ ಸ್ವತ್ತನ್ನು ಹೊರತುಪಡಿಸಿ ನಮಗೂ ಹಾಗೂ 5 ನೇ ಪ್ರತಿವಾದಿಗೆ ಸ್ವತ್ತು 1 ಎಕರೆ 6 ಗುಂಟೆ ಎಂದರೆ 1 ಎಕರೆ 11 ಗುಂಟೆ ಎಂದು ಸಾಕ್ಷಿಯು ನುಡಿಯುತ್ತಾರೆ.

ದಾವಾ ಸ್ವತ್ತುಗಳನ್ನು ಸುಮಾರು 5 ಲಕ್ಷಗಿಂತ ಹೆಚ್ಚು ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ವಿಷಯವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಸ.ನಂ.10/6 ರಲ್ಲಿ ಜಮೀನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ವಿನಾಃ ಕಾರಣವಾಗಿ ನಾನು ಪ್ರತಿವಾದಿಗಳಿಗ ಸ್ವತ್ತಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿದ್ದು ಮುಂದಿನ ಪಾಟೀ ಸವಾಲು ಇರುವುದಿಲ್ಲ.

ಮರುವಿಚಾರಣೆ ಇರುವುದಿಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ